ಶ್ರೀ ಎಚ್. ವಿಶ್ವನಾಥ್ : ತಾವು ಹೇಳಿದ್ದು ಸರಿ ಇದೆ. ಕೆಲವು ಕಡೆ 50 ಮಕ್ಕಳಿಗೆ ನಾಲ್ಕು ಜನ ಉಪಾಧ್ಯಾಯರು ಇರುತ್ತಾರೆ. ಕೆಲವು ಕಡೆ ಮೂರು ಮಕ್ಕಳಿಗೆ ಇಬ್ಬರು ಉಪಾಧ್ಯಾಯರು ಇರುತ್ತಾರೆ. ನಾವು ಇದನ್ನು ಪತ್ತೆ ಹಚ್ಚಿ ಇಡೀ ರಾಜ್ಯದಲ್ಲಿ ಸುಮಾರು 5000 ಶಿಕ್ಷಕರನ್ನು ಸ್ಥಳಾಂತರ ಮಾಡಿದ್ದೇವೆ. ಹೆಚ್ಚುವರಿ ಶಿಕ್ಷಕರನ್ನು ಕೊರತೆ ಇರುವ ಕಡೆ ವರ್ಗಾವಣೆ ಮಾಡಿದ್ದೇನೆ. ಮತ್ತೆ, ಸುಮಾರು 3,000ಕ್ಕೂ ಹೆಚ್ಚು ಖಾಸಗಿ ಶಾಲೆ ಶಿಕ್ಷಕರನ್ನು ಹೆಚ್ಚುವರಿ ಇರುವ ಕಡೆಯಿಂದ ಕೊರತೆ ಇರುವಂತಹ ಸ್ಥಳಗಳಿಗೆ ವರ್ಗಾವಣೆ ಮಾಡುವಂತಹ ಕೆಲಸ ಸರ್ಕಾರ ಮಾಡಿದೆ. ತಾವು ಹೇಳಿದ್ದು ಕೂಡ ಗಮನದಲ್ಲಿಟ್ಟುಕೊಂಡು ನಾವು ತೀವ್ರವಾದ ಪ್ರಯತ್ನವನ್ನು ಈ ದಿಸೆಯಲ್ಲಿ ಮಾಡುತ್ತೇವೆ.

ವಿಶ್ವಬ್ಯಾಂಕ್ ನೆರವಿನಿಂದ ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಕಾಮಗಾರಿ

539 -ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸಮಗ್ರ ಗ್ರಾಮೀಣ ನೀರು ಮತ್ತು ನೈರ್ಮಲ್ಯ ಕಾಮಗಾರಿಗೋಸ್ಕರ ವಿಶ್ವಬ್ಯಾಂಕ್‌ನಿಂದ ಬಿಡುಗಡೆಯಾದ ಹಣವೆಷ್ಟು?*

ಆ) *ಈ ಯೋಜನೆಗೆ ಯಾವ ಜಿಲ್ಲೆಗಳು ಮತ್ತು ತಾಲ್ಲೂಕುಗಳನ್ನು ಸೇರಿಸಲಾಗಿದೆ.*

ಇ) *ಹಾಗಿದ್ದಲ್ಲಿ, ಈ ಯೋಜನೆಗೆ ಇನ್ನೂ ಹಲವಾರು ಜಿಲ್ಲೆಗಳು ಮತ್ತು ತಾಲ್ಲೂಕುಗಳನ್ನು ಸೇರಿಸದಿರಲು ಕಾರಣವೇನು?*

ಶ್ರೀ ಎಂ. ದಿವಾಕರ್‌ಬಾಬು (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ರಾಜ್ಯ ಸಚಿವರು) :

ಅ) ಸಮಗ್ರ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಕಾಮಗಾರಿಗೋಸ್ಕರ ವಿಶ್ವಬ್ಯಾಂಕ್‌ನಿಂದ ರೂ. 366.178 ಕೋಟಿ ಹಣ ಬಿಡುಗಡೆಯಾಗಿರುತ್ತದೆ.

ಆ) ಹೊಸದಾಗಿ ರಚನೆಗೊಂಡ 4 ಜಿಲ್ಲೆಗಳು ಸೇರಿದಂತೆ 16 ಜಿಲ್ಲೆಗಳ 103 ತಾಲ್ಲೂಕು-ಗಳನ್ನು ಈ ಯೋಜನೆಯಡಿ ಸೇರಿಸಲಾಗಿದೆ. (ವಿವರಗಳನ್ನು ಅನುಬಂಧ-1ರಲ್ಲಿ ಕೊಡಲಾಗಿದೆ)

ಇ) ವಿಶ್ವಬ್ಯಾಂಕ್ ಯೋಜನೆಯ ವಿಸ್ತಾರವು ಹಿಂದಿನ 12 ಜಿಲ್ಲೆಗಳಿಗೆ (ಈಗಿನ 16 ಜಿಲ್ಲೆಗಳು) ಸೀಮಿತವಾಗಿತ್ತು. ಈ ಜಿಲ್ಲೆಗಳಲ್ಲಿಯ ಗ್ರಾಮಗಳನ್ನು ಈ ಕೆಳಕಂಡ ಮಾರ್ಗಸೂಚಿಗಳನ್ನು ಆಧಾರವಾಗಿಟ್ಟುಕೊಂಡು ಸಂಬಂಧಪಟ್ಟ ಜಿಲ್ಲಾ ಪಂಚಾಯತ್‌ಗಳು ಆಯ್ಕೆ ಮಾಡಿರುತ್ತವೆ.

1. ಕುಡಿಯುವ ನೀರಿನ ತೀವ್ರ ಕ್ಷಾಮವಿರುವ ಗ್ರಾಮಗಳು
2. ಕುಡಿಯುವ ನೀರಿನಿಂದ ಆರೋಗ್ಯದ ಮೇಲೆ ಪರಿಣಾಮ ಬೀರುವ ತೊಂದರೆಗಳಿರುವ ಗ್ರಾಮಗಳು ಉದಾಹರಣೆ : ಗಿನಿಯಾ ಹುಳು, ಫ್ಲೋರೋಸಿಸ್, ಕಾಲರಾ ಮುಂತಾದವು.

3. ತಲಾ ದಿನಂಪ್ರತಿ 40 ಲೀಟರ್‌ಗಿಂತ ಕಡಿಮೆ ಕುಡಿಯುವ ನೀರು ದೊರೆಯುತ್ತಿರುವ ಗ್ರಾಮಗಳು.

4. ಕುಡಿಯುವ ನೀರನ್ನು ಒದಗಿಸಲು ಸಾಕಷ್ಟು ಅಂತರ್ಜಲವಿಲ್ಲದೆ ಗ್ರಾಮಗಳಿಗೆ ಪ್ರಾದೇಶಿಕ (Regional) ನೀರು ಸರಬರಾಜು ಯೋಜನೆಗಳನ್ನು ಒದಗಿಸುವುದು.

5. ಸಾಕಷ್ಟು ನೈರ್ಮಲೀಕರಣವಿಲ್ಲದ ಗ್ರಾಮಗಳು.

ವಿಶ್ವಬ್ಯಾಂಕ್ ನೆರವಿಗಾಗಿ ಫಾಲೋ-ಆನ್-ಯೋಜನೆಯು ಮಾತುಕತೆಯ ಹಂತದಲ್ಲಿರುತ್ತದೆ.

ಅನುಬಂಧ - 1

ವಿಶ್ವಬ್ಯಾಂಕಿನ ನೆರವಿನೊಂದಿಗೆ ರಾಜ್ಯದಲ್ಲಿ ತೆಗೆದುಕೊಳ್ಳಲಾಗಿರುವ ಕುಡಿಯುವ ನೀರಿನ ಯೋಜನೆಗಳ ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿವರಗಳು

ಕ್ರಮ	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು
1	ಬೆಂಗಳೂರು (ಗ್ರಾ)	ಹೊಸಕೋಟೆ
		ದೊಡ್ಡಬಳ್ಳಾಪುರ
		ನೆಲಮಂಗಲ
		ದೇವನಹಳ್ಳಿ
		ಚನ್ನಪಟ್ಟಣ
		ಕನಕಪುರ
		ಮಾಗಡಿ
		ರಾಮನಗರ
2.	ತುಮಕೂರು	ತುಮಕೂರು
		ತಿಪಟೂರು
		ತುರುವೇಕೆರೆ
		ಗುಬ್ಬಿ
		ಕುಣಿಗಲ್
		ಮಧುಗಿರಿ
		ಸಿರಾ
		ಕೊರಟಗೆರೆ
		ಪಾವಗಡ

ಕ್ರಮ	ಜಿಲ್ಲೆಯ ಹೆಸರು	ತಾಲ್ಲೂಕಿನ ಹೆಸರು
		ಚಿಕ್ಕನಾಯಕನಹಳ್ಳಿ
3	ಶಿವಮೊಗ್ಗ	ಶಿವಮೊಗ್ಗ
		ಭದ್ರಾವತಿ
		ತೀರ್ಥಹಳ್ಳಿ
		ಸಾಗರ
		ಸೊರಬ
		ಶಿಕಾರಿಪುರ
		ಹೊಸನಗರ
4	ಚಾಮರಾಜನಗರ	ಚಾಮರಾಜನಗರ
		ಗುಂಡ್ಲುಪೇಟೆ
		ಕೊಳ್ಳೇಗಾಲ
		ಯಳಂದೂರು
5	ದಾವಣಗೆರೆ	ಚನ್ನಗಿರಿ
		ಹೊನ್ನಾಳಿ
6	ಮೈಸೂರು	ಮೈಸೂರು
		ನಂಜನಗೂಡು
		ಟಿ. ನರಸೀಪುರ
		ಕೆ.ಆರ್. ನಗರ
		ಹುಣಸೂರು
		ಪಿರಿಯಾಪಟ್ಟಣ
		ಹೆಚ್.ಡಿ.ಕೋಟೆ
7	ಮಂಡ್ಯ	ಕೆ.ಆರ್.ಪೇಟೆ
		ಮದ್ದೂರು
		ಮಳವಳ್ಳಿ
		ಮಂಡ್ಯ
		ನಾಗಮಂಗಲ
		ಪಾಂಡವಪುರ
		ಶ್ರೀರಂಗಪಟ್ಟಣ

ಕ್ರಮ	ಜಿಲ್ಲೆಯ ಹಸಿರು	ತಾಲ್ಲೂಕಿನ ಹೆಸರು
8	ಮಂಗಳೂರು	ಬಂಟ್ವಾಳ
		ಮಂಗಳೂರು
		ಪುತ್ತೂರು
		ಸುಳ್ಯ
		ಬೆಳ್ತಂಗಡಿ
9	ಉಡುಪಿ	ಕುಂದಾಪುರ
		ಕಾರ್ಕಳ
		ಉಡುಪಿ
10	ಹಾಸನ	ಆಲೂರು
		ಸಕಲೇಶಪುರ
		ಅರಕಲಗೂಡು
		ಬೇಲೂರು
		ಹಾಸನ
		ಚನ್ನರಾಯಪಟ್ಟಣ
		ಹೊಳೆನರಸೀಪುರ
		ಅರಸೀಕೆರೆ
11	ಬೆಳಗಾವಿ	ಬೈಲಹೊಂಗಲ
		ಬೆಳಗಾವಿ
		ಖಾನಾಪುರ
		ರಾಮದುರ್ಗ
		ಸೌಂದತ್ತಿ
		ಅಥಣಿ
		ಚಿಕ್ಕೋಡಿ
		ಗೋಕಾಕ್
		ಹುಕ್ಕೇರಿ
		ರಾಯಭಾಗ
12	ಗುಲ್ಬರ್ಗಾ	ಅಫಜಲಪುರ
		ಆಳಂದ

ಕ್ರಮ	ಜಿಲ್ಲೆಯ ಹಸಿರು	ತಾಲ್ಲೂಕಿನ ಹೆಸರು
		ಚಿಂಚೋಳಿ
		ಚಿತ್ತಾಪುರ
		ಗುಲ್ಬರ್ಗಾ
		ಸೇಡಂ
		ಶಹಾಪುರ
		ಶೋರಾಪುರ
		ಯಾದಗಿರಿ
		ಜೇವರ್ಗಿ
13	ಬೀದರ್	ಹುಮ್ನಾಬಾದ್
		ಬೀದರ್
		ಬಸವಕಲ್ಯಾಣ
		ಭಾಲ್ಕಿ
		ಔರಾದ್
14	ರಾಯಚೂರು	ದೇವದುರ್ಗ
		ಲಿಂಗಸುಗೂರು
		ಮಾನ್ವಿ
		ರಾಯಚೂರು
		ಸಿಂಧನೂರು
15	ಕೊಪ್ಪಳ	ಗಂಗಾವತಿ
		ಕೊಪ್ಪಳ
		ಕುಷ್ಟಗಿ
		ಯಲಬುರ್ಗಾ
16	ಬಳ್ಳಾರಿ	ಬಳ್ಳಾರಿ
		ಸಿರಗುಪ್ಪ
		ಸಂಡೂರು
		ಹರಪನಹಳ್ಳಿ
		ಹಡಗಲಿ
		ಹಗರಿಬೊಮ್ಮನಹಳ್ಳಿ
		ಕೂಡ್ಲಿಗಿ

ಶ್ರೀ ಅಂಜನಮೂರ್ತಿ : ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಉತ್ತರವಾಗಿ ಸರ್ಕಾರದವರು ರೂ. 366.178 ಕೋಟಿ ರೂಪಾಯಿಗಳಷ್ಟು ಹಣ ಬಿಡುಗಡೆಯಾಗಿದೆ ಎಂದು ಹೇಳಿದ್ದಾರೆ. ಇಷ್ಟು ಭಾರೀ ಪ್ರಮಾಣದ ಹಣ ಬಿಡುಗಡೆಯಾಗಿದ್ದರೂ ಸಹ ಇವರು ಆಯ್ಕೆ ಮಾಡಿರುವುದು ಬರೀ 16 ಜಿಲ್ಲೆಗಳನ್ನು ಮಾತ್ರ. ಇನ್ನೂ 11 ಜಿಲ್ಲೆಗಳು ಈ ಯೋಜನೆಯಲ್ಲಿ ಸೇರ್ಪಡೆಯಾಗಿಲ್ಲ. ಇಷ್ಟು ಹಣ ಬಿಡುಗಡೆಯಾದರೂ ಸಹ ಜನರ ಕಣ್ಣಿಗೆ ಕಾಣುವ ರೀತಿಯಲ್ಲಿ, ಅಥವಾ ಇದರ ಉದ್ದೇಶ ಏನು ಇದೆ ಅದರ ಪ್ರಕಾರ ಕೆಲಸ ನಡೆಯುತ್ತಿಲ್ಲ. ಉದಾಹರಣೆಗೆ ನನ್ನ ಎರಡು ಮತ್ತು ಮೂರನೇ ಪ್ರಶ್ನೆಯಲ್ಲಿ ಕೇಳಿರುವ ವಿಚಾರವೇನಿದೆ ಅದು ಬಹಳ ಮುಖ್ಯವಾದುದು. ಅದಕ್ಕೆ 103 ತಾಲ್ಲೂಕುಗಳನ್ನು ಸೇರಿಸಿ 16 ಜಿಲ್ಲೆಗಳಾಗಿ ಮಾಡಿದ್ದಾರೆ. ಇಡೀ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ದೊಡ್ಡಬಳ್ಳಾಪುರ, ನೆಲಮಂಗಲ, ಮಾಗಡಿ ಇನ್ನೂ ಅನೇಕ ತಾಲ್ಲೂಕುಗಳು ಸೇರಿವೆ ಎಂದು ಹೇಳುತ್ತಾರೆ. ದೊಡ್ಡಬಳ್ಳಾಪುರದ ಒಂದು ಹೋಬಳಿ ನನ್ನ ಕ್ಷೇತ್ರಕ್ಕೆ ಬರುತ್ತದೆ, ಮಾಗಡಿಯಿಂದ ಸೋಲೂರು ಹೋಬಳಿಗೆ ಬರುತ್ತದೆ, ನೆಲಮಂಗಲ ಸೇರಿದಂತೆ ಇದುವರೆಗೆ ಅಲ್ಲಿ ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ ಒಂದು ಕೆಲಸವೂ ಆಗಿಲ್ಲ. ತಾವು ಕೋಲಾರ ಜಿಲ್ಲೆಯಿಂದ ಬಂದಂತಹವರು. ಮುಳಬಾಗಿಲಿನಲ್ಲಿ ನೀರಿನ ಸೌಕರ್ಯ ಇರಬಹುದು, ಆದರೆ ಬೇರೆ ಪ್ರದೇಶವನ್ನು ತೆಗೆದುಕೊಂಡಾಗ ಅಲ್ಲಿ ಎಷ್ಟು ನೀರಿನ ಅಭಾವವಿದೆ ಅದು ತಮಗೆ ಗೊತ್ತಿದೆ. ಆ ಜಿಲ್ಲೆಯನ್ನು ಏಕೆ ಸೇರಿಸಿಲ್ಲ? ಈ ರೀತಿ ಬಿಟ್ಟಿರತಕ್ಕಂತಹ ತಾಲ್ಲೂಕುಗಳನ್ನು ಈ ವರ್ಷದಲ್ಲಿ ಹೊಸ ಮಾರ್ಗಸೂಚಿಯ ಪ್ರಕಾರ ತೆಗೆದುಕೊಂಡಿದ್ದೇವೆಂದು ಹೇಳುತ್ತಾರೆ. ಕುಡಿಯುವ ನೀರಿನ ತೀವ್ರ ಕ್ಷಾಮ ಇರುವ ಗ್ರಾಮಗಳು, ಕುಡಿಯುವ ನೀರಿನಿಂದ ಆರೋಗ್ಯದ ಮೇಲೆ ಪರಿಣಾಮವಾಗಿರತಕ್ಕಂತಹ ಪ್ರದೇಶಗಳು. ಈ ರೀತಿಯಾಗಿ ತಲಾ 40 ಲೀಟರ್ ನೀರು ಸಿಗದೆ ಇರತಕ್ಕಂತಹ ಪ್ರದೇಶಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರು ಹೇಳುವುದು ಬೇರೆ ಗ್ರಾಮಗಳಲ್ಲಿ ಒಬ್ಬ ವ್ಯಕ್ತಿಗೆ 40 ಲೀಟರ್ ನೀರು ಸಿಗುತ್ತದೆ. ಅಥವಾ ಅಲ್ಲಿ ನೀರಿನ ಅಭಾವವಿಲ್ಲವೆಂದು ತಿಳಿದುಕೊಂಡು ಈ ಜಿಲ್ಲೆಗಳನ್ನು ಅಥವಾ ತಾಲ್ಲೂಕುಗಳನ್ನು ಸೇರಿಸಿಲ್ಲವೆಂದು ಹೇಳಬೇಕು. ಬಿಟ್ಟಿರತಕ್ಕಂತಹ ತಾಲ್ಲೂಕುಗಳು ನೆಲಮಂಗಲ ಇರಬಹುದು, ಮಾಗಡಿ ಇರಬಹುದು, ದೊಡ್ಡಬಳ್ಳಾಪುರ ಇರಬಹುದು, ಅಲ್ಲಿ ಈ ವರ್ಷವಾದರೂ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಅವರು ಮುಂದಾಗುತ್ತಾರೆಯೇ? ಅಥವಾ ಯಾವ ರೀತಿ ಕೆಲಸ ಮಾಡುತ್ತಾರೆಂದು ನಮಗೆ ತಿಳುವಳಿಕೆ ನೀಡಬೇಕು.

ಶ್ರೀ ಎಂ. ದಿವಾಕರಬಾಬು : ಮಾನ್ಯ ಅಧ್ಯಕ್ಷರೆ, ಈ ಯೋಜನೆಯಡಿಯಲ್ಲಿ ಬರುವ 16 ಜಿಲ್ಲೆಗಳಲ್ಲಿ 103 ತಾಲ್ಲೂಕುಗಳನ್ನು ನಾವು ಆಯ್ಕೆ ಮಾಡಿದ್ದೇವೆ. ಜಿಲ್ಲಾ ಪಂಚಾಯಿತಿಯಲ್ಲಿ ಇವುಗಳನ್ನು ಸೆಲೆಕ್ಟ್ ಮಾಡಿ, ಯಾವ ಯಾವ ತಾಲ್ಲೂಕುಗಳನ್ನು, ಜಿಲ್ಲೆಗಳನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಅವರ ಪ್ರಕರಣಗಳನ್ನು ನೋಡಿ ಅದರ ಪ್ರಕಾರ ಆಯ್ಕೆ ಮಾಡಿದ್ದಾರೆ. ಇನ್ನುಳಿದ ಜಿಲ್ಲೆಗಳನ್ನು ಮುಂದಿನ ವರ್ಲ್ಡ್ ಬ್ಯಾಂಕ್ ಪ್ರೋಗ್ರಾಂನಲ್ಲಿ ಇನ್‌ಕ್ಲೂಡ್ ಮಾಡುತ್ತೇವೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಅಂಜನಾಮೂರ್ತಿ : ಮಾನ್ಯ ಅಧ್ಯಕ್ಷರೆ, ನಮಗೆ ಈ ಅಂಕಿ ಅಂಶಗಳನ್ನು ಸರ್ಕಾರ ಕೊಟ್ಟಿದೆಯೋ ವಿನಃ ವಿಶ್ವಬ್ಯಾಂಕ್‌ನವರು ಕೊಟ್ಟಿರುವುದಿಲ್ಲ. ಅಧಿಕಾರಿಗಳು ಕೊಟ್ಟಂತಹ

ಮಾಹಿತಿಯಾಧಾರದ ಮೇಲೆ ನಿಜವಾದಂತಹ ಕೆಲಸವಾಗಬೇಕಾದ ತಾಲ್ಲೂಕುಗಳಾಗಲಿ ಅಥವಾ ಜಿಲ್ಲೆಗಳಲ್ಲಾಗಲಿ ಅದನ್ನು ಪೂರೈಸದೆ ಕಡೆಗಾಣಿಸಬಾರದು. ಆದಕಾರಣ ಆ ನಿಟ್ಟಿನಲ್ಲಿ ಯಾವ ರೀತಿಯಾದ ಕ್ರಮವನ್ನು ಸಚಿವರು ತೆಗೆದುಕೊಳ್ಳುತ್ತಾರೆ ಎಂಬುದಕ್ಕೆ ಉತ್ತರ ಕೊಡಬೇಕು.

ಶ್ರೀ ಎಂ. ದಿವಾಕರಬಾಬು : ಮಾನ್ಯ ಅಧ್ಯಕ್ಷರೇ, ಜಿಲ್ಲಾ ಪಂಚಾಯತ್ ಸಭೆಯಲ್ಲಿ ಯೋಜನೆಯನ್ನು ಇಟ್ಟು ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳುತ್ತೇವೆ. ಮಾನ್ಯ ಸದಸ್ಯರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯಾವುದಾದರೂ ಗ್ರಾಮಗಳನ್ನು ಸೇರಿಸುವುದಿದ್ದರೆ, ಆ ಮಾಹಿತಿಯನ್ನು ನಮಗೆ ಕೊಟ್ಟರೆ ಅದನ್ನೂ ಇನ್‌ಕ್ಲೂಡ್ ಮಾಡಿಕೊಳ್ಳುತ್ತೇವೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೇ, ವಿಶ್ವಬ್ಯಾಂಕ್ ನೆರವಿನ ಕುಡಿಯುವ ನೀರಿನ ಹಾಗೂ ನೈರ್ಮಲ್ಯದ ಯೋಜನೆ ತುಮಕೂರು ಜಿಲ್ಲೆಯಲ್ಲೂ ಕಾರ್ಯಗತಗೊಳ್ಳಲು ಬಂದಿದೆ. ಇಲ್ಲಿ ಒಂದು ತಾಂತ್ರಿಕವಾದ ಸಮಸ್ಯೆ ಇದೆ. ಅದೇನೆಂದರೆ ಶೇಕಡ 100ಕ್ಕೆ 10ರಷ್ಟು ಭಾಗದ ಹಣವನ್ನು ಗ್ರಾಮದ ಗ್ರಾಮಸ್ಥರು ತುಂಬಿದಾಗ ಮಾತ್ರ ಈ ಯೋಜನೆಯನ್ನು ಆ ಗ್ರಾಮದಲ್ಲಿ ಕೈಗೆತ್ತಿಕೊಳ್ಳಲಾಗುತ್ತದೆ. ಆದರೆ ಆ 10 ಭಾಗದ ಹಣವನ್ನು ಕಟ್ಟದಿದ್ದರೆ ಯೋಜನೆಯನ್ನು ಕೈಗೆತ್ತಿಕೊಳ್ಳುವುದಿಲ್ಲ. ಹೀಗಾಗಿ ನನ್ನ ಕ್ಷೇತ್ರವೂ ಸೇರಿದಂತೆ ಹಲವಾರು ಶಾಸಕರ ಕ್ಷೇತ್ರಗಳ ಗ್ರಾಮಗಳಲ್ಲಿ 10 ಭಾಗದ ಹಣವನ್ನು ಗ್ರಾಮಸ್ಥರು ಕಟ್ಟದಿರುವ ಕಡೆ ವಿಶ್ವಬ್ಯಾಂಕ್‌ನವರು ಯೋಜನೆಯನ್ನು ತೆಗೆದುಕೊಂಡಿಲ್ಲ ಮತ್ತು ವಿಶ್ವಬ್ಯಾಂಕ್‌ನವರು ಯೋಜನೆಯನ್ನು ತೆಗೆದುಕೊಳ್ಳುತ್ತಾರೆ ಎಂದು ಹೇಳಿ ಜಿಲ್ಲಾ ಪರಿಷತ್‌ನವರು ಕೂಡ ಈ ಯೋಜನೆಯನ್ನು ತೆಗೆದುಕೊಳ್ಳುತ್ತಿಲ್ಲ. ಈ ರೀತಿಯಾಗಿ ಯಾರೂ ಕೂಡ ಯೋಜನೆ ತೆಗೆದುಕೊಳ್ಳದಿರುವುದರಿಂದ ಇದಕ್ಕೆ ಯಾವ ರೀತಿಯ ಪರಿಹಾರದ ಕಾರ್ಯವನ್ನು ಮಾಡುತ್ತಾರೆ ಎಂಬ ಬಗ್ಗೆ ಮಾನ್ಯ ಸಚಿವರು ಹೇಳಬೇಕು.

ಇನ್ನು ಎರಡನೆಯದಾಗಿ ಪ್ರಮುಖವಾಗಿ ಹೇಳಬೇಕೆಂದರೆ, ಕುಡಿಯುವ ನೀರಿನ ಯೋಜನೆಯನ್ನು ಕಾರ್ಯಗತಗೊಳಿಸಲು ಇದನ್ನು ಒಂದು ಸಮಿತಿಗೆ ವಹಿಸಿಕೊಟ್ಟಿದ್ದಾರೆ. ಈ ಸಮಿತಿಯನ್ನು ಹಿಂದೆ ಯಾರೋ ಮಾಡಿದ್ದು. ಯಾರೋ ಒಬ್ಬ ಅಳಿಮಯ್ಯ ಅಧ್ಯಕ್ಷನಾಗಿ ಬಂದಿದ್ದಾಗ ಸಮಿತಿ ರಚನೆಯಾಗಿ ಈಗ ಆ ಅಳಿಮಯ್ಯ ಹೊರಟು ಹೋಗಿರುವುದರಿಂದ ಈಗ ಅವನನ್ನು ಎಲ್ಲಿ ನಾನು ಹುಡುಕುವುದು? ಈಗೇನಾಗಿದೆಯೆಂದರೆ, ಆ ಸಮಿತಿಯೂ ಇಲ್ಲ, ಇವರು ಆಯ್ಕೆ ಮಾಡಿದ ಅಧ್ಯಕ್ಷನೂ ಇಲ್ಲದೇ ಇರುವುದರಿಂದ ಈಗ ಯಾರನ್ನು ಕೇಳಬೇಕೋ ಗೊತ್ತಿಲ್ಲ. ಆದುದರಿಂದ ನಾನು ಹೇಳುವುದೇನೆಂದರೆ, ಹಿಂದಿನ ಯೋಜನೆಗಳು ಅಂದಾಜಿನ ಪ್ರಕಾರ ಕಾರ್ಯರೂಪಕ್ಕೆ ಬಂದಿವೆಯೇ ಅಥವಾ ಇಲ್ಲವೇ ಎಂಬ ಬಗ್ಗೆ ತೀರ್ಮಾನ ಮಾಡಬೇಕು ಮತ್ತು ಸದರಿ ಯೋಜನೆಯನ್ನು ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿ ಅಥವಾ ಜಿಲ್ಲಾ ಪಂಚಾಯತಿಗೆ ಕಾನೂನಿನ ಚೌಕಟ್ಟಿನಲ್ಲಿ ವಹಿಸಬೇಕೆಂದು ತಿಳಿಸುತ್ತೇನೆ. ಏಕೆಂದರೆ ಹಿಂದೆ ಇದನ್ನು ಒಂದು ಸಮಿತಿಗೆ ವಹಿಸಿದ್ದರಿಂದ ಅತ್ಯಂತ ಕೆಟ್ಟ ಪರಿಣಾಮ ನಮ್ಮ ಕಡೆಯಲ್ಲಾಗಿದೆ. ಯಾರನ್ನೋ ಅಧ್ಯಕ್ಷರನ್ನಾಗಿ ಮಾಡಿದ್ದರು, ಆದರೆ ಆತ ಈಗ ನಾನು ಅಧ್ಯಕ್ಷನಾಗಿಲ್ಲವೆನ್ನುತ್ತಾನೆ. ಆದಕಾರಣ ಗ್ರಾಮ ಪಂಚಾಯತಿ ಅಥವಾ ತಾಲ್ಲೂಕು ಪಂಚಾಯತಿಗೆ ಯೋಜನೆಯನ್ನು ಹ್ಯಾಂಡ್‌ಓವರ್ ಮಾಡಬೇಕು. ಇನ್ನು ಗ್ರಾಮಸ್ಥರು 10 ಭಾಗದ ಹಣವನ್ನು ಕಟ್ಟದಿದ್ದರೆ ಅಲ್ಲಿ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತಾರೆ ಎಂಬ ಬಗ್ಗೆ ಕೂಡ ಮಾನ್ಯ ಸಚಿವರು ಹೇಳಬೇಕು.

ಶ್ರೀ ಎಂ. ದಿವಾಕರಬಾಬು : ವಿಶ್ವಬ್ಯಾಂಕ್ ನಿಯಮಾವಳಿಗಳ ಪ್ರಕಾರ ಯೋಜನೆಯ ಶೇಕಡ 78ರಷ್ಟು ಹಣವನ್ನು ವಿಶ್ವಬ್ಯಾಂಕ್, ಶೇಕಡ 15ರಷ್ಟು ಹಣವನ್ನು ರಾಜ್ಯ ಸರ್ಕಾರ ಕೊಟ್ಟರೆ ಇನ್ನುಳಿದ ಶೇಕಡ 7ರಷ್ಟು ಹಣವನ್ನು ಲೋಕಲ್ ಕಾಂಟ್ರಿಬ್ಯೂಷನ್ ರೀತಿಯಲ್ಲಿ ಗ್ರಾಮಸ್ಥರು ತುಂಬಬೇಕು. ಗ್ರಾಮಸ್ಥರು ಹಣವನ್ನು ತುಂಬದಿದ್ದರೆ ಯೋಜನೆಯನ್ನು ಜಾರಿಗೊಳಿಸಬಾರದೆಂದು ವಿಶ್ವಬ್ಯಾಂಕ್ ನಿಯಮವಿರುವುದರಿಂದ ಅದನ್ನು ನಾವು ಪಾಲಿಸಬೇಕಾಗಿದೆ. ಇನ್ನು ಸದರಿ ಯೋಜನೆಯನ್ನು ಗ್ರಾಮ ಪಂಚಾಯತಿಗೆ ವಹಿಸಲು ಈಗಾಗಲೇ ಡೈರೆಕ್ಷನ್ಸ್ ಕಳುಹಿಸಿದ್ದೇವೆಯಾದ ಕಾರಣ, ಅದರ ಪ್ರಕಾರ ಈಗಿನ ಎಲ್ಲಾ ವಿಶ್ವಬ್ಯಾಂಕ್ ಯೋಜನೆಗಳು ಟ್ರಯಲ್ ಹಂತವಾದ ಮೇಲೆ ಗ್ರಾಮಪಂಚಾಯತಿಗೆ ಹ್ಯಾಂಡ್ ಓವರ್ ಆಗುತ್ತವೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಈ ವಿಶ್ವಬ್ಯಾಂಕ್ ಯೋಜನೆಯ ಕುಡಿಯುವ ನೀರಿನ ಯೋಜನೆಯನ್ನು ಮೊದಲ ಹಂತದಲ್ಲಿ ಆಂಧ್ರದ ಕಂಟ್ರಾಕ್ಟರ್‌ಗೆ ಕೊಟ್ಟಿದ್ದರಿಂದ ಸಾಕಷ್ಟು ಅವ್ಯವಹಾರಗಳಾಯಿತು. ಅವರು ಕೆಲವು ಕಡೆ ಕೆಲಸವನ್ನೇ ಮಾಡದಿದ್ದರೂ ಕೂಡ ನಮ್ಮ ಇಲಾಖೆಯವರು ಅವರ ಬಿಲ್‌ಗೆ ಹಣವನ್ನು ಕೊಟ್ಟು ಕಳುಹಿಸಿ ಬಿಟ್ಟಿದ್ದಾರೆ. ಈ ರೀತಿಯಾಗಿ ಎಲ್ಲಿ ಆಗಿದೆ ಅಲ್ಲಿ ಕೆಲಸ ಪೂರ್ಣವಾಗುವುದಕ್ಕೆ ಸರ್ಕಾರ ಏನು ಮಾಡುತ್ತದೆ ಎಂಬ ಬಗ್ಗೆ ಹೇಳಬೇಕು. ಉದಾಹರಣೆಗೆ ಕುಣಂದೂರಿನಲ್ಲಿ ಪೈಪ್‌ಲೈನ್ ಹಾಕದೇ ಇದ್ದರೂ ಕೂಡ ಕಂಟ್ರಾಕ್ಟರ್‌ಗೆ ಹಣವನ್ನು ಇಂಜಿನಿಯರಿಂಗ್ ವಿಭಾಗದವರು ಕೊಟ್ಟುಬಿಟ್ಟಿದ್ದಾರೆ. ಈ ರೀತಿ ಎಲ್ಲೆಲ್ಲಿ ಕೆಲಸ ಅಪೂರ್ಣವಾಗಿದೆ ಅಲ್ಲಿ ಕೆಲಸ ಪೂರ್ಣವಾಗಲು ಹೆಚ್ಚುವರಿ ಅನುದಾನವನ್ನು ಸರ್ಕಾರ ಕೊಡುತ್ತದೆಯೇ ಎಂಬ ಬಗ್ಗೆ ಹೇಳಬೇಕು.

ಶ್ರೀ ಎಂ. ದಿವಾಕರಬಾಬು : ಮಾನ್ಯ ಅಧ್ಯಕ್ಷರೆ, ಒಂದು ತಿಂಗಳು ಟ್ರಯಲ್ ಎಂದು ಕೆಲಸಗಳನ್ನು ಮಾಡಿದ ಮೇಲೆ ಅದನ್ನು ಗ್ರಾಮ ಪಂಚಾಯತಿಗೆ ಹ್ಯಾಂಡ್ ಓವರ್ ಮಾಡುತ್ತೇವೆ. ಹ್ಯಾಂಡ್ ಓವರ್ ಮಾಡಿದ ನಂತರ ಒಂದೆರಡು ವರ್ಷಗಳಲ್ಲಿ ಏನಾದರೂ ಸಣ್ಣ ಪುಟ್ಟ ರಿಪೇರಿ ಕಾರ್ಯಗಳು ಇದ್ದರೆ ಅದನ್ನು ಅವರೇ ಮೇನ್‌ಟೆನೆನ್ಸ್ ಮಾಡಬೇಕಾಗುತ್ತದೆ. ಇದು ಆದಮೇಲೆ ಏನಾದರೂ ರಿಪೇರಿ ಬಂದರೆ ಅದನ್ನು ಜಿಲ್ಲಾ ಪಂಚಾಯತ್ ಮತಿಯಿಂದ ಮಾಡಿಸಿಕೊಡುತ್ತೇವೆಂದು ತಿಳಿಸ ಬಯಸುತ್ತೇನೆ. ಇನ್ನು ಕುಣಂದೂರಿನ ಪ್ರಕರಣದ ಬಗ್ಗೆ ವಿಚಾರಣೆ ಮಾಡಿಸಿ ನಾನು ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಹೆಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್ ನೆರವಿನ ಕುಡಿಯುವ ನೀರಿನ ಯೋಜನೆ ಮಾಗಡಿ ತಾಲ್ಲೂಕಿನಲ್ಲೂ ಕೂಡ ಮೂರು ಕಡೆ ಕಳೆದ ಆರು ವರ್ಷಗಳಿಂದ ನಡೆಯುತ್ತಿದೆಯಾದರೂ ಅದು ಇನ್ನೂ ಪೂರ್ಣಗೊಂಡಿಲ್ಲ. ಇನ್ನು ಈ ಯೋಜನೆಯನ್ನು ಒಂದು ಸಮಿತಿಗೆ ವಹಿಸಿರುವುದರಿಂದ ಶ್ರೀ ವೈ.ಕೆ. ರಾಮಯ್ಯನವರು ಹೇಳಿದ ಹಾಗೆ ಕೆಟ್ಟ ಪರಿಣಾಮ ಬೀರುವುದರಿಂದ ಇದನ್ನು ಗ್ರಾಮ ಪಂಚಾಯತಿಗೆ ವಹಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈಗ ಸಮಿತಿ ಮಾಡಿರುವುದರಿಂದ ಆ ಸಮಿತಿಗೆ ನೀರು ಬಿಡುವ ಒಬ್ಬ ನೌಕರನನ್ನು ನೇಮಕ ಮಾಡಿಕೊಳ್ಳಲು ಕೂಡ ಅವಕಾಶವಿಲ್ಲವಾದ್ದರಿಂದ ನೀರು ಬಿಡುವವನಿಗೆ ಊರಿನವರೇ ಸಂಬಳ ಕೊಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಆದರೆ ಯಾವ ಗ್ರಾಮದವರೂ ಕೂಡ ಇದನ್ನು ಅನುಸರಿಸಲು ಮುಂದೆ ಬರುವುದಿಲ್ಲವಾದ ಕಾರಣ ಈ ಯೋಜನೆಯನ್ನು ಗ್ರಾಮ ಪಂಚಾಯತಿಗೆ ಹ್ಯಾಂಡ್ ಓವರ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ದಿವಾಕರಬಾಬು : ಮಾನ್ಯ ಅಧ್ಯಕ್ಷರೆ, ಈಗ ಕುಡಿಯುವ ನೀರಿನ ಯೋಜನೆಯನ್ನು ಗ್ರಾಮ ಪಂಚಾಯತಿಗೆ ವಹಿಸಲು ಯೋಚಿಸಲಾಗಿದೆ. ಇನ್ನು ಅಪೂರ್ಣ ಕೆಲಸಗಳ ವಿವರಗಳು ಎಲ್ಲೆಲ್ಲಿ ಸಿಗುತ್ತದೆ ಅದನ್ನೆಲ್ಲಾ 2001ರ ಮಾರ್ಚ್‌ಯೊಳಗೆ ಮುಗಿಸುತ್ತೇವೆಂದು ವಿಶ್ವಬ್ಯಾಂಕ್‌ನವರಿಗೆ ಹೇಳಿದ್ದೇನೆ.

ಶ್ರೀ ವಿ. ಪಾಪಣ್ಣ : ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್ ಯೋಜನೆಯ ಅಡಿಯಲ್ಲಿ ಬರುವ ಈ ಕುಡಿಯುವ ನೀರಿನ ಯೋಜನೆಯನ್ನು ನನ್ನ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಕೈಗೆತ್ತಿಕೊಂಡು ಈಗಾಗಲೇ ಒಂದು ಗ್ರಾಮದಲ್ಲಿ ನೀರು ಬಿಟ್ಟು ಜಗಳವಾಗಿ ನಿಂತುಹೋಗಿದೆ. ಇದಕ್ಕೆ ಶ್ರೀ ವೈ.ಕೆ. ರಾಮಯ್ಯನವರು ಹೇಳಿದ ಹಾಗೆ ಸಮಿತಿ ಕಾರ್ಯವೈಖರಿ ಕೂಡ ಕಾರಣವಾಗಿದೆ. ಅದು 100ಕ್ಕೆ 100ರಷ್ಟು ಸತ್ಯ. ಆದಕಾರಣ ಈ ಯೋಜನೆಯನ್ನು ಇಂದೇ ಆದೇಶ ಕೊಡುವ ಮೂಲಕ ಗ್ರಾಮ ಪಂಚಾಯತಿಗೆ ವಹಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಈಗಿನ ಸಮಿತಿಯವರು ನೀರಿನ ಕನೆಕ್ಷನ್ ಕೊಡುವುದಕ್ಕೆ 500 ರೂಪಾಯಿಗಳನ್ನು ಕೇಳುತ್ತಿರುವ ಉದಾಹರಣೆಗಳಿವೆ. ಹಿಂದೆ ಇದ್ದ ಸಮಿತಿ ಒಂದು ಸರ್ಕಾರದ ಸಮಿತಿಯಾಗಿದೆಯಾದ ಕಾರಣ ಈಗಿರುವ ಪಕ್ಷದವರು ನೀರು ಬಿಡದೇ ಕಟ್ ಮಾಡುತ್ತಿದ್ದಾರೆ. ಆದಕಾರಣ ದಯಮಾಡಿ ಇಂದೇ ಸದರಿ ಯೋಜನೆಯನ್ನು ಗ್ರಾಮ ಪಂಚಾಯತಿಗೆ ವಹಿಸಲು ಆದೇಶ ಕೊಡಬೇಕೆಂದು ನಾನು ಮಾನ್ಯ ಸಚಿವರಲ್ಲಿ ಮನವಿ ಮಾಡುತ್ತೇನೆ.

ಶ್ರೀ ಎಂ. ದಿವಾಕರಬಾಬು : ಮಾನ್ಯ ಸದಸ್ಯರಾದ ಪಾಪಣ್ಣನವರು ಹೇಳಿದ ಹಾಗೆ ನಾವು ಡೈರಕ್ಷನ್ ಕಳುಹಿಸುತ್ತೇವೆ.

ಶ್ರೀ ಹಂಪನಗೌಡ ಬಾದರ್ಲಿ : ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್ ನೆರವಿನ ಸುಮಾರು 11 ಯೋಜನೆಗಳನ್ನು ನನ್ನ ಕ್ಷೇತ್ರದಲ್ಲಿಯೂ ಕಾರ್ಯರೂಪಕ್ಕೆ ತಂದಿದ್ದಾರೆ. ಅದರಲ್ಲಿ ನನ್ನ ತಾಲ್ಲೂಕಿನಲ್ಲಿ ಕ್ಲೋರೈಡ್ ಕಂಟೆಂಟ್ಸ್ ಹೆಚ್ಚಾಗಿದೆ. ಜವಳಗೇರಿ ಎನ್ನುವ ತಾಲ್ಲೂಕಿನಲ್ಲಿ ಸುಮಾರು 25 ಲಕ್ಷ ರೂಪಾಯಿಗಳನ್ನು ಕುಡಿಯುವ ನೀರಿನ ಯೋಜನೆಗೆ ಖರ್ಚು ಮಾಡಿದ್ದಾರೆ. ಆದರೆ ಮೊದಲು ಯಾವ ಭಾಗದಲ್ಲಿ ನೀರಿನ ಸೋರ್ಸ್ ಕಂಡುಹಿಡಿದಿದ್ದಾರೋ ಅಲ್ಲಿ ಕ್ಲೋರೈಡ್ ಕಂಟೆಂಟ್ಸ್ ಜಾಸ್ತಿಯಾಗಿ ಈಗ ಆ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಮತ್ತೆ ಹಣದ ಮೊತ್ತ ಜಾಸ್ತಿಯಾಗಿದೆ. ಈ ಹೆಚ್ಚಿನ ಹಣವನ್ನು ಯಾರು ಕೊಡಬೇಕು ಎಂದು ಇತ್ಯರ್ಥವಾಗದೆ ಆ ಯೋಜನೆ ಇನ್ನೂ ಪೂರ್ಣಗೊಂಡಿಲ್ಲ. ನನ್ನ ತಾಲ್ಲೂಕಿನಲ್ಲಿ 11 ಯೋಜನೆಗಳು ಇದೇ ಸ್ಥಿತಿಯಲ್ಲಿ ಇವೆ. ರಾಯಚೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿಯೂ ಕೂಡ ಇದೇ ಪರಿಸ್ಥಿತಿ ಇದೆ. ಆದಕಾರಣ ಈ ಯೋಜನೆಗಳು ಪೂರ್ಣಗೊಳ್ಳಲು ಬೇಕಾದ ಹಣವನ್ನು ಸರ್ಕಾರ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ವಿಶ್ವಬ್ಯಾಂಕ್‌ನವರು ಕೊಡಬೇಕಾದ ಹಣವನ್ನು ಯೋಜನೆಗೆ ಕೊಟ್ಟಿರುವುದರಿಂದ ಮತ್ತೆ ಹಣವನ್ನು ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತಾರೆ. ಆದರೆ ಯೋಜನೆಗಳು ಇನ್ನೂ ಪೂರ್ಣಗೊಂಡಿಲ್ಲ. ಇದಕ್ಕೆ ಬೇಕಾದ ಹೆಚ್ಚಿನ ಹಣವನ್ನು ರಾಜ್ಯ ಸರ್ಕಾರ ಕೊಡುತ್ತದೆಯೇ ಮತ್ತು ಯಾವಾಗ ಯೋಜನೆಯನ್ನು ಪೂರ್ಣ ಮಾಡುತ್ತಾರೆ ಎಂಬ ಬಗ್ಗೆ ಹೇಳಬೇಕು.

12.30 ಪಿ.ಎಂ

ಶ್ರೀ ಎಂ. ದಿವಾಕರ ಬಾಬು : ಮಾನ್ಯ ಸದಸ್ಯರಾದ ಹಂಪನಗೌಡರು ಹೇಳಿದ ಹಾಗೆ ಬಹಳಷ್ಟು ಸೋರ್ಸ್ ಡ್ರೈ ಆಗಿದ್ದು, ಡ್ರೈ ಆದಮೇಲೆ ಪುನಃ ಹೊಸ ಸೋರ್ಸ್ ಅನ್ನು ಹುಡುಕಿ ನಾವು ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ವಿಶ್ವಬ್ಯಾಂಕ್ ಯೋಜನೆಯಲ್ಲಿ ಹಣ ಇನ್ನು ಬಿಡುಗಡೆಯಾಗಿಲ್ಲ. ಜಿಲ್ಲಾಪಂಚಾಯತ್ ಹಾಗೂ ನಮ್ಮ ಸರ್ಕಾರದ ವತಿಯಿಂದ ಅದಕ್ಕೆ ಹೆಚ್ಚುವರಿ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ.

ಅಧ್ಯಕ್ಷರು : ಮಾನ್ಯ ಸದಸ್ಯರು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಇನ್ನು ಎಂಟು ಪ್ರಶ್ನೆಗಳು ಇವೆ. How can I manage them? If it goes on like this, remaining questions will lapse.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ವಿಶ್ವ ಬ್ಯಾಂಕಿನ ನೆರವಿನಡಿಯಲ್ಲಿ 366.178 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ ಎಂದು ಹೇಳುತ್ತಿದ್ದಾರೆ. ಇಲ್ಲಿ ಕೆಲಸ ಯಾವಾಗ ಪ್ರಾರಂಭವಾಗುತ್ತದೆ ಹಾಗೂ ಯಾವಾಗ ಮುಗಿಯುತ್ತದೆ ಎನ್ನುವ ಬಗ್ಗೆ ಒಂದು ಸಮಯ ನಿಗಧಿ ಆಗಿಲ್ಲ. ಕಾಮಗಾರಿ ಕೆಲಸ ಮುಂದೆ ಮುಂದೆ ಹೋದಹಾಗೆ ಕಾಸ್ಟ್ ಆಫ್ ಪ್ರೈಜ್ ಜಾಸ್ತಿಯಾಗುತ್ತಾ ಹೋಗುತ್ತದೆ. ನೀವು 10 ಲಕ್ಷ ರೂಪಾಯಿಗಳ ಒಂದು ಕೆಲಸಕ್ಕೆ ಎಂದು ಅಂದಾಜು ಇಟ್ಟರೆ ಅದು 20 ರಿಂದ 30 ಲಕ್ಷ ರೂಪಾಯಿಗಳವರೆಗೂ ಹೋಗುತ್ತದೆ. ಆದ್ದರಿಂದ ಆ ಕೆಲಸಗಳಿಗೆ ಸಮಯ ನಿಗಧಿಯಾಗಬೇಕು. ಅದರ ಜೊತೆಗೆ ಕುಡಿಯುವ ನೀರಿಗೆ ಹಣ ಬಿಡುಗಡೆಯಾಗಿದೆ ಎಂದು ಸಾಕಷ್ಟು ಪ್ರಚಾರವಾಗುತ್ತಿದೆ. ಇದಕ್ಕೆ ಕೋಟಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗುತ್ತಿದೆ ಎಂದು ಪತ್ರಿಕೆಗಳಲ್ಲಿ, ಸದನದಲ್ಲಿ ಮಂತ್ರಿಗಳು ಹೇಳುವಾಗ, ನಮ್ಮ ಕ್ಷೇತ್ರದಲ್ಲಿ ಜನ ನಮಗೆ ಕೇಳುತ್ತಾರೆ. ಸರ್ಕಾರ ಕುಡಿಯುವ ನೀರಿಗಾಗಿ ಇಷ್ಟು ಹಣ ಖರ್ಚು ಮಾಡುತ್ತಿದೆ, ಆದರೆ ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿ ಆಗಿಲ್ಲ. ನೀವು ಶಾಸಕರುಗಳು ಸರಿಯಾಗಿ ಕೆಲಸ ಮಾಡುತ್ತಿಲ್ಲ ಎನ್ನುವಂತಹ ಅಪಾದನೆಯನ್ನು ನಾವೆಲ್ಲರೂ ಹೊರುತ್ತಿದ್ದೇವೆ. ಆದುದರಿಂದ ಈ ಕೆಲಸಕ್ಕೆ ಹಣ ಸರಿಯಾಗಿ ವಿತರಣೆಯಾಗಬೇಕು. ಮತ್ತು ಇದನ್ನು ಗ್ರಾಮಪಂಚಾಯಿತಿಗೆಳಿಗೆ ವಹಿಸಬೇಕೆಂದು ಸನ್ಮಾನ್ಯ ಪಾಪಣ್ಣನವರು ಹೇಳಿದರು. ಅದಕ್ಕೆ ಮಾನ್ಯ ಮಂತ್ರಿಗಳು ಆದೇಶ ಕೊಡುತ್ತೇನೆಂದು ಒಪ್ಪಿಕೊಂಡರು. ಗ್ರಾಮಪಂಚಾಯತ್‌ಗಳಿಗೆ ಈ ಕೆಲಸವನ್ನು ವಹಿಸಿದರೆ ಅದನ್ನು ಮೈಂಟೇನ್ ಮಾಡುವುದಕ್ಕೆ ಹಣ ಎಲ್ಲಿದೆ? ಗ್ರಾಮ ಪಂಚಾಯತ್‌ಗಳಿಗೆ ಹಣ ಇಲ್ಲ. ಅದೇ ಕಾರಣಕ್ಕೆ ಗ್ರಾಮಪಂಚಾಯತ್ ನಿಂದ ಜಿಲ್ಲಾ ಪಂಚಾಯತ್‌ಗೆ ವಾಪಸ್ಸು ಬಿಟ್ಟು ಕೊಟ್ಟರು. ತಾಲ್ಲೂಕು ಪಂಚಾಯತ್ ಇವತ್ತು ಮೈಂಟೇನ್ ಮಾಡಬೇಕೆಂದು ಹೇಳುತ್ತಿದ್ದಾರೆ. ಅದು ಆಗುತ್ತಲೇ ಇಲ್ಲ. ರಿಪೇರಿಯಂತೂ ಸಾಧ್ಯವೇ ಇಲ್ಲ. ಕಷ್ಟಪಟ್ಟು ಬಾವಿ ತೋಡಿದರೆ ರಿಪೇರಿ ಮಾಡುವುದಕ್ಕೆ ಆಗುವುದೇ ಇಲ್ಲವೆನ್ನುವ ಪರಿಸ್ಥಿತಿ ಇದೆ. ಅದಕ್ಕೆ, ಬೇರೆ ಹಣವನ್ನು ಪಂಚಾಯಿತಿಗಳಿಗೆ ಇದಕ್ಕೋಸ್ಕರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು. ಮತ್ತು ಈ ಪ್ರಚಾರ ಏನಿದೆ ಈ ಬಗ್ಗೆ ನನ್ನನ್ನು ಕೇಳಿದರೆ ಬಹುಶಃ ಮಾನ್ಯ ಸಿಂಧ್ಯರವರು ಒಪ್ಪಿಕೊಳ್ಳುತ್ತಾರೆ ಎಂದುಕೊಳ್ಳುತ್ತೇನೆ, ಕುಡಿಯುವ ನೀರಿನ ಬಗ್ಗೆ ತುಂಬಾ

ಗೊಂದಲ ಇದೆ. ಯಾವುದೇ ಊರಿನಲ್ಲಿ ಸರಿಯಾದ ಸಮರ್ಪಕವಾದಂತಹ ಕುಡಿಯುವ ನೀರಿನ ವ್ಯವಸ್ಥೆಯಾಗಿಲ್ಲ. ಬಹಳಷ್ಟು ಹಣ ಖರ್ಚಾಗಿದೆ. ಆದರೆ ಸರಿಯಾಗಿ ವಿತರಣೆಯಾಗುತ್ತಿಲ್ಲ. ಆದುದರಿಂದ ಇದರ ಬಗ್ಗೆ ಅರ್ಧ ಗಂಟೆ ಕಾಲ ಚರ್ಚೆ ಮಾಡುವುದಕ್ಕೆ ಮಾನ್ಯ ಅಧ್ಯಕ್ಷರು ಕಾಲಾವಕಾಶ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆಂದು ನನ್ನ ಭಾವನೆ.

ಶ್ರೀ ಎಂ. ದಿವಾಕರ ಬಾಬು : ಮಾನ್ಯ ಶಿವಪ್ಪನವರು ಹೇಳಿದ ಪ್ರಶ್ನೆಗೆ ಈ ಯೋಜನೆಯಲ್ಲಿ ಸ್ವಲ್ಪಮಟ್ಟಿಗೆ ವಿಳಂಬವಾಗಿದ್ದು ನಿಜ. ಅದಕ್ಕೆ ಎಸ್ಕಲೇಷನ್ ಕಾಸ್ಟ್ ಜಾಸ್ತಿಯಾಗಿದೆ. ಇಲ್ಲವೆಂದು ಹೇಳುವುದಿಲ್ಲ. ಆದರೆ ನಾವು ಎಸ್ಕಲೇಷನ್ ಆಗಿದೆ ಎಂದು ಯಾವುದೇ ಕೆಲಸವನ್ನು ನಿಲ್ಲಿಸಿಲ್ಲ. ಅದಕ್ಕೆ ಬೇರೆ ರೂಪದಲ್ಲಿ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಹಾಗೂ ನಿರ್ವಹಣೆ ಬಗ್ಗೆ ಅವರು ಹೇಳಿದರು. ನಿರ್ವಹಣೆಯನ್ನು ಗ್ರಾಮಪಂಚಾಯಿತಿಯವರು ಮಾಡಬೇಕು. ಏಕೆಂದರೆ ಈ ಕೆಲಸವನ್ನು ಗ್ರಾಮಪಂಚಾಯತ್ ತೆಗೆದುಕೊಂಡ ಮೇಲೆ ಅವರೇ ನಿರ್ವಹಣೆ ಮಾಡಬೇಕು. ಅದಕ್ಕಾಗಿ ಹಣವನ್ನು ಅವರು ನೀರನ್ನು ಉಪಯೋಗಿಸುವವರಿಂದ ಕಲೆಕ್ಟ್ ಮಾಡಬೇಕು. ಅವರಿಂದ ವಾಟರ್ ಟ್ಯಾಕ್ಸ್ ಕಲೆಕ್ಟ್ ಮಾಡಬೇಕು. ವಾಟರ್ ಟ್ಯಾಕ್ಸ್ ಕಲೆಕ್ಟ್ ಮಾಡಲು ಪ್ರಾವಿಷನ್ ಇದೆ. ಬಹಳ ದೊಡ್ಡದಾದ ರಿಪೇರಿ ಬಂದರೆ ಜಿಲ್ಲಾ ಪಂಚಾಯತ್ ಇಲ್ಲದೇ ಇದ್ದರೆ ಸರ್ಕಾರ ಅವರಿಗೆ ಧನಸಹಾಯ ನೀಡುತ್ತದೆ.

ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳಿಗೆ ಅನುದಾನ

540 - ಶ್ರೀ ಸಿಂಧ್ಯ ಪಿ.ಜಿ.ಆರ್. (ಕನಕಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ವಿವಿಧ ಗ್ರಾಮಪಂಚಾಯಿತಿಗಳಿಗೆ 2000-2001ನೇ ಸಾಲಿನಲ್ಲಿ ನೀಡಿರುವ ಅನುದಾನ ಎಷ್ಟು? (ಜಿಲ್ಲಾವಾರು ವಿವರಗಳನ್ನು ಕೊಡುವುದು)*

ಆ) *ಈ ಅನುದಾನ ಬಿಡುಗಡೆಯಲ್ಲಿ ವಿಳಂಬವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು?*

ಶ್ರೀ ಎಂ. ದಿವಾಕರ ಬಾಬು (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ರಾಜ್ಯ ಸಚಿವರು) :

ಅ) ರಾಜ್ಯದಲ್ಲಿ ವಿವಿಧ ಗ್ರಾಮ ಪಂಚಾಯತಿಗಳಿಗೆ 2000-2001ನೇ ಸಾಲಿನಲ್ಲಿ ರೂ. 11,268-00 ಲಕ್ಷ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಇಲ್ಲಿಯವರೆಗೆ ಮೂರು ಕಂತುಗಳಲ್ಲಿ ಒಟ್ಟು ರೂ. 7,243.74 ಲಕ್ಷ ಅನುದಾನವನ್ನು ಜಿಲ್ಲಾ ಪಂಚಾಯತ್‌ಗಳಿಗೆ ಬಿಡುಗಡೆ ಮಾಡಲಾಗಿದೆ. ಉಳಿದ ಹಣವನ್ನು ಮುಂದಿನ ಕಂತಿನಲ್ಲಿ ಬಿಡುಗಡೆ ಮಾಡಲಾಗುವುದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.